

ಡಾ.ವಿನೋದ ಛೆಬ್ಬಿ

ತಾಯ್ತಂದೆತನದ ಭಾವವು ಸಾರ್ವತ್ರಿಕ: ಯಾರದೇ ಮಕ್ಕಳನ್ನು ಕಂಡರೂ ಮಾತೃತ್ವ ಭಾವ ಸ್ಫುರಿಸುತ್ತದೆ.

# 260:ಮಗು ಬೇಕೆ? ಏಕೆ?-13

ಹೋದಸಲ ಕುಟುಂಬ ರಾಜಕೀಯದ ಹಿನ್ನೆಲೆಯಲ್ಲಿ ಮಗುವನ್ನು ಮಾಡಿಕೊಳ್ಳಲು ಹೊರಟಿರುವ ಉದ್ದೇಶವನ್ನು ಪ್ರಶ್ನಿಸುತ್ತ, ಇತರರಿಂದ ಗುರುತಿಸಿಕೊಳ್ಳುವುದಕ್ಕೂ ತಾಯ್ತನದ ಅನುಭವ ಪಡೆಯಲು ತಯಾರಾಗುವುದಕ್ಕೂ ವ್ಯತ್ಯಾಸವಿದೆ ಎಂದು ಹೇಳುತ್ತಿದ್ದೆ.

ಮಗುವನ್ನು ಹೊಂದುವ ಹಿಂದಿನ ರಾಜಕೀಯದ ಬಗೆಗೆ ಯೋಚಿಸುವಾಗ ಇನ್ನೊಂದು ವಿಷಯ ನೆನಪಾಯಿತು: ಮಕ್ಕಳಿಲ್ಲದವರನ್ನು ಸಾರ್ವಜನಿಕರು ಹೇಗೆ ಕಾಣುತ್ತಿದ್ದಾರೆ? ಮಕ್ಕಳಿರದ ಸ್ಥಿತಿಯು ಬಡತನದಷ್ಟೇ ಸಾರ್ವಕಾಲಿಕವೂ ಸಾರ್ವತ್ರಿಕವೂ ಆಗಿದೆ! ಹಾಗಾದರೆ ಇದಕ್ಕೆ ವಿಶೇಷ ಮಾನ್ಯತೆ ಹೇಗೆ ಬಂತು? ಮಕ್ಕಳಿರುವವರು ಇಲ್ಲದವರನ್ನು ಕೀಳಾಗಿ ಕಾಣುತ್ತಾರೆ ಎನ್ನುವುದೇ ಇದಕ್ಕೆ ಕಾರಣ! ಹಾಗಾಗಿ ಇದೂ ಧರ್ಮ, ವರ್ಣ, ಜನಾಂಗ ಭೇದಗಳ ಸಾಲಿಗೆ ಸೇರಿದೆ. ಮಕ್ಕಳಿದ್ದವರು ಹಾಗೂ ಮದುವೆ ಬೇಡವೆನ್ನುವವರು ಅದರಲ್ಲೂ ಹೆಂಗಸರು– ಲೈಂಗಿಕ ಅಲ್ಪಸಂಖ್ಯಾತರಂತೆ ಗಣಿಸಲ್ಪಡುತ್ತಾರೆ. ಅದಕ್ಕಾಗಿ ರ್‍ಯಾಚೆಲ್ ಕ್ರ್ಯಾಸ್ಪಿಲ್‌ನಂಥವರು ಮಕ್ಕಳಿಲ್ಲದವರ ಪರವಾಗಿಯಲ್ಲದೆ ಮದುವೆಯಾಗದೆ ಒಂಟಿಯಾಗಿ ಬದುಕುವವರ ಪರವಾಗಿಯೂ ಹೋರಾಡುತ್ತಿದ್ದಾರೆ.

ಮಗುವಾದರೆ ಸಾಕು ಎನ್ನುವ ಆತಂಕ ಗಂಡಸರಲ್ಲೂ ಸಾಕಷ್ಟಿದೆ. ವೀರ್ಯದ ದೋಷದಿಂದ ಗರ್ಭಧಾರಣೆ ಅಸಾಧ್ಯ ಎನ್ನುವುದು ಗಂಡಸುತನಕ್ಕೆ ಕಳಂಕವೆಂದು (ಏನೂ ಸಂಬಂಧವಿಲ್ಲದಿದ್ದರೂ) ಹೆಚ್ಚಿನವರು ಭಾವಿಸುತ್ತಾರೆ. ಅದನ್ನು ಸಂಗಾತಿಯೊಡನೆ ಹಂಚಿಕೊಳ್ಳದೆ ಗುಟ್ಟಾಗಿ ಸರಿಪಡಿಸಿಕೊಳ್ಳಲು ಹೆಣಗುತ್ತಾರೆ. (ಕೆಲವು ವರ್ಷಗಳ ಹಿಂದೆ ಕೃತಕ ಗರ್ಭಧಾರಣೆಯ ಕೇಂದ್ರವನ್ನು ನಡೆಸುತ್ತಿರುವಾಗ ವೀರ್ಯದೋಷವಿರುವ ಗಂಡಸರು ಹೆಂಡತಿಗೆ ತಿಳಿಯದಂತೆ ಅಜ್ಞಾತ ಪುರುಷನ ವೀರ್ಯದಿಂದ ಗರ್ಭಧಾರಣೆ ಮಾಡಲು ಕೇಳಿಕೊಂಡಿದ್ದು ನೆನಪಿದೆ.) ಇನ್ನು, ಶೀಘ್ರ ಸ್ಖಲನದಂಥ ಲೈಂಗಿಕ ಸಮಸ್ಯೆಯಿರುವಾಗ ಅನಗತ್ಯವಾಗಿ ವೀರ್ಯಪರೀಕ್ಷೆ ಮಾಡಿಸಿಕೊಂಡು, ಅದರಲ್ಲಿ ಕಂಡ ಸಹಜ ವ್ಯತ್ಯಾಸಗಳನ್ನು ತಪ್ಪಾಗಿ ನಿರ್ಣಯಿಸಿ ಮದುವೆಯ ವಿಚಾರವನ್ನೇ ಕೈಬಿಟ್ಟ ಯುವಕರನ್ನು ಕಂಡಿದ್ದೇನೆ. (ವೀರ್ಯದ ದೋಷಕ್ಕೂ ಲೈಂಗಿಕ ಸಮಸ್ಯೆಗೂ ಏನೇನೂ ಸಂಬಂಧವಿಲ್ಲ!) ಇನ್ನು, ವೀರ್ಯದೋಷ ಕಂಡುಬಂದಾಗ ಮುಂಚೆಯಿರದ ಶಿಶ್ನದೌರ್ಬಲ್ಯ ಪ್ರತ್ಯಕ್ಷವಾಗಿ ಸಂಭೋಗ ಅಸಾಧ್ಯವಾಗಿರುವುದು ಅನೇಕರ ಅನುಭವ. ವೀರ್ಯದೋಷದಿಂದ ಖಿನ್ನತೆಗೆ ಒಳಗಾದ ಗಂಡಸರಿಗೆ ಒಂದು ಮಾತು.

ದಾಂಪತ್ಯದಲ್ಲಿ ಲೈಂಗಿಕ ಸಾಮರಸ್ಯದ ಬಗೆಗೆ ಭರವಸೆ ಕೊಡಬಹುದೇ ವಿನಾ ಸಂತಾನೋತ್ಪತ್ತಿ ಬಗೆಗೆ ಕೊಡಲು ಸಾಧ್ಯವಿಲ್ಲ– ಯಾಕೆಂದರೆ ಅದು ಯಾರ ಕೈಯಲ್ಲೂ ಇಲ್ಲ. ಹಾಗೆ ನೋಡಿದರೆ ದಾಂಪತ್ಯದಲ್ಲಿ ಸಂತಾನಕ್ಕೆ ಮೊದಲ ಆದ್ಯತೆ ಇಲ್ಲವೇ ಇಲ್ಲ– ಒಂದು ವೇಳೆ ಹಾಗಿದ್ದಲ್ಲಿ ಮೊದಲು ಗಂಡು–ಹೆಣ್ಣು ಸಂಭೋಗದಲ್ಲಿ ತೊಡಗಿ, ಮಗುವಾದ ನಂತರವೇ ಮದುವೆಯಾಗುವುದು ರೂಢಿಯಲ್ಲಿ ಇರುತ್ತಿತ್ತು! ಇನ್ನೊಂದು ಕುತೂಹಲಕರ ವಿಷಯವೆಂದರೆ, ಹೆಣ್ಣು ಗರ್ಭಿಣಿಯಾಗಲು ಯತ್ನಿಸುತ್ತಿರುವಾಗ ಗಂಡು ಹೆಚ್ಚುಹೆಚ್ಚಾಗಿ ಹಾಗೂ ದೀರ್ಘಕಾಲ ಸಂಭೋಗ ನಡೆಸುವ ಜವಾಬ್ದಾರಿ ಹೊರುವುದೂ ಇದೆ. ಇದರಿಂದ ಗರ್ಭಕಟ್ಟುವ ಸಂಭವ ಹೆಚ್ಚು ಎಂದು ತಪ್ಪು ನಂಬಿಕೆಯಿದೆ (ವೈಜ್ಞಾನಿಕವಾಗಿ, ದಿನಬಿಟ್ಟು ದಿನ ಸಂಭೋಗ ಹೆಚ್ಚು ಸೂಕ್ತ). ಹೀಗೆ, ದಿನಕ್ಕೆ ನಾಲ್ಕೈದು ಸಲ ಸಂಭೋಗ ನಡೆಸಿದ ಗಂಡಸರು ಸಾಕಷ್ಟಿದ್ದಾರೆ. ಇದರಿಂದ ಹೆಣ್ಣಿನ ಮೇಲೆ ಏನು ಪರಿಣಾಮ ಆದೀತು? ಗೊತ್ತಿಲ್ಲ, ಆದರೆ 'ನಿನ್ನೊಡನೆ ನಾನಿದ್ದೇನೆ' ಎನ್ನುವ ಅನಿಸಿಕೆ ಅವಳ ಮನಸ್ಸನ್ನು ಆಳವಾಗಿ ತಟ್ಟುತ್ತದೆ. ಹಾಗಾಗಿ ಅವಳು ಪ್ರತಿಕೂಟವನ್ನೂ ಸವಿಯುತ್ತಾಳೆ ಎಂದೆನಿಸುತ್ತದೆ. ಹೆಚ್ಚುಹೆಚ್ಚಾದ ಕಾಮಕೂಟವು ಪ್ರಣಯಭರಿತವಾಗಿದ್ದು ಮನೋಲೈಂಗಿಕ ಆರೋಗ್ಯದೊಡನೆ ತಳಕು ಹಾಕಿಕೊಂಡಿರುತ್ತದೆ ಎನ್ನುವುದಕ್ಕೆ ಮನಃಶಾಸ್ತ್ರದಲ್ಲಿ ಆಧಾರವಿದೆ. ಇನ್ನು, ಹೆಣ್ಣು ಹೆರಿಗೆಯಲ್ಲಿ ತೊಡಗಿದಾಗ ಆಗುವ ಅನುಭವವು ಆಕೆಯ ಗಂಡನಿಗೂ ಆದುದರ ಬಗೆಗೆ ಕೆಲವೆಡೆ ಉಲ್ಲೇಖವಿದೆ. ಗಂಡಹೆಂಡಿರ ನಡುವಿನ ಅನ್ಯೋನ್ಯತೆಯು ಗಾಢವಾದಷ್ಟೂ ಹಾಗೂ ಗಂಡಿನ ಸಂವೇದನಾಶೀಲತೆಯು ಉತ್ಕಟವಾಗುತ್ತ ಇಬ್ಬರ ನಡುವೆ ತಾದಾತ್ಮ್ಯತೆ (attunement) ಹುಟ್ಟುತ್ತದೆ. ಆಗ (ಸಮನಾಗಿ ಶ್ರುತಿಗೊಳಿಸಿದ ಎರಡು ತಂತಿಗಳಲ್ಲಿ ಒಂದನ್ನು ಮೀಟಿದಾಗ ಇನ್ನೊಂದೂ ಕಂಪಿಸುವಂತೆ) ಹೆಣ್ಣಿನ ಶಾರೀರಿಕ ಅನುಭವವನ್ನು ಗಂಡು ಅನುಭವಿಸಬಲ್ಲ.

## ಸಹಜ ಹಾಗೂ ಮುಕ್ತ ತಾಯ್ತನ

ಹೆಣ್ಣು ತಾಯಿಯಾಗಲು ಬಯಸುವುದು ಸಾರ್ವತ್ರಿಕವೂ ಸಾರ್ವಕಾಲಿಕವೂ ಆಗಿದೆ. ಸಹಜವಾದ ತಾಯ್ತನ ಹೇಗಿರುತ್ತದೆ? ಗರ್ಭಿಣಿಯೆಂದು ಗೊತ್ತಾದಾಗ ಹರ್ಷ, ಮಗುವಿಗೆ ಉತ್ಸಾಹದಿಂದ ತಯಾರಿ, ಗರ್ಭಸ್ಥ ಶಿಶುವಿನ ಮೊದಲ ಚಲನೆಯನ್ನು ಅನುಭವಿಸಿದಾಗ ಪುಳಕ, ಹಾಗೂ ಹೆರಿಗೆಯ ನಂತರ ನವಜಾತ ಶಿಶುವು ಪಕ್ಕದಲ್ಲಿ ಮಲಗಿದಾಗ ಅನಿರ್ವಚನೀಯ ತೃಪ್ತಿ ಹಾಗೂ ಸಾರ್ಥಕತೆ– ಇವೆಲ್ಲ ಅನುಭವಿಸಿದವರಿಗೇ ಗೊತ್ತು. (ಒಂದು ವೇಳೆ ಹೆಣ್ಣಾಗಿದ್ದರೆ ಈ ಅನುಭವವನ್ನು ನಾನೂ ಪಡೆಯಬಹುದಿತ್ತು ಎಂದು ವೈಯಕ್ತಿಕವಾಗಿ ಅನಿಸಿದ್ದಿದೆ.) ಇನ್ನೊಂದು ವಿಷಯ ಏನೆಂದರೆ, ತಾಯ್ತನದ ಭಾವ ಸಾರ್ವತ್ರಿಕ: ಯಾರದೇ ಮಕ್ಕಳನ್ನು ಕಂಡರೂ ಮಾತೃತ್ವ ಭಾವ ಸ್ಫುರಿಸುತ್ತದೆ. ಅದಕ್ಕೊಂದು ದೃಷ್ಟಾಂತ:

ನಾಲ್ಕು ದಶಕಗಳ ಹಿಂದಿನ ಸಂಗತಿ. ರೈಲು ಪ್ರಯಾಣದಲ್ಲಿದ್ದೆ. ನನ್ನೆದುರು ಆಧುನಿಕ ಮಹಿಳೆಯೊಬ್ಬಳು ಶಿಶುವಿನೊಂದಿಗೆ ಕುಳಿತಿದ್ದಳು. ಮುಂದಿನ ನಿಲ್ದಾಣದಲ್ಲಿ ಹಳ್ಳಿಯ ಹೆಂಗಸೊಬ್ಬಳು ಗಾಡಿಹತ್ತಿ ಮಹಿಳೆಯ ಪಕ್ಕದ ಜಾಗವನ್ನು ಆಕ್ರಮಿಸಿದಳು. ಆಕೆಯ ಕೈಯಲ್ಲೂ ಒಂದು ಹಸುಗೂಸಿತ್ತು. ಅದು ಕಿರಿಕಿರಿ ಮಾಡಿದಾಗ ಆಕೆ ಎಳ್ಳಷ್ಟೂ ಸಂಕೋಚವಿಲ್ಲದೆ ಎಲ್ಲರೆದುರು ಎದೆತೆರೆದು ಹಾಲು ಕುಡಿಸಲು ಶುರುಮಾಡಿದಳು. ಇದನ್ನು ಗಮನಿಸಿದ ಮಹಿಳೆ ಮುಖ ಸಿಂಡರಿಸಿಕೊಂಡು ಕಿಟಕಿಯ ಹೊರಗೆ ನೋಡುತ್ತಿದ್ದಳು. ಸ್ವಲ್ಪ ಹೊತ್ತಿನ ತರುವಾಯ ಮಹಿಳೆಯ ಶಿಶು ಎದ್ದು ಅಳಹತ್ತಿತು. ಆಕೆ ಹಾಲು ಸಿದ್ಧಪಡಿಸಿ ಬಾಟಲನ್ನು ಶಿಶುವಿನ ಬಾಯಲ್ಲಿಡಲು ನೋಡಿದಾಗ ಕುಡಿಯದೆ ಹಟ ಮಾಡಿತು. ಯಾವುದೇ ಯತ್ನಕ್ಕೂ ಅದರ ತಾರಕ ಸ್ವರ ನಿಲ್ಲಲಿಲ್ಲ. ಸಮಾಧಾನ ಮಾಡಲು ತಿಳಿಯದ ಮಹಿಳೆ ಕಂಗೆಟ್ಟಿದ್ದು ಸ್ಪಷ್ಟವಾಗಿತ್ತು. ಆಗ ಹಳ್ಳಿಯ ಹೆಂಗಸು, 'ಆ ಕೂಸನ್ನ ಇತ್ಲಾಗ್ ಕೊಡ್ರವ್ವ...' ಎನ್ನುತ್ತಾ ಹೆಚ್ಚು ಕಡಿಮೆ ಮಹಿಳೆಯಿಂದ ಕಸಿದುಕೊಂಡು ತನ್ನೆದೆಗೆ ಇಟ್ಟುಕೊಂಡಳು. ಎದೆಯ ಸ್ಪರ್ಶವಾದದ್ದೇ ತಡ, ಆ ಪುಟ್ಟಜೀವಿಯು ಅತ್ಯಂತ ಅವಸರದಿಂದ ಹಾಲುಹೀರಲು ಶುರುಮಾಡಿತು! ಇದನ್ನು ನೋಡುತ್ತಿದ್ದ ಮಹಿಳೆಗೆ ಏನು ಅನುಭವ ಆಯಿತೋ ಗೊತ್ತಿಲ್ಲ. ನಂತರವೂ ಆಕೆ ಕಿಟಕಿಯ ಹೊರಗೆ ನೋಡುತ್ತಿದ್ದಳು– ಈ ಸಲ ಆಕೆಯ ಕಣ್ಣಲ್ಲಿ ನೀರಿತ್ತು. ಅಂತಃಕರಣದಿಂದ ಸ್ಫುರಿಸುವ ತಾಯ್ತನ ಹೇಗಿರುತ್ತದೆ ಎಂದು ಗೊತ್ತಾಯಿತಲ್ಲ? ಇತ್ತೀಚೆಗೆ ರಾಜಕಾರಣಿ ಮಹಿಳೆಯೊಬ್ಬಳು ಸಾರ್ವಜನಿಕವಾಗಿ ಎದೆಹಾಲು ಕುಡಿಸಿದ್ದು ಸುದ್ದಿಯಾಗಿತ್ತು.

ಒಟ್ಟಿನಲ್ಲಿ, ಮಕ್ಕಳನ್ನು ಮಾಡಿಕೊಳ್ಳುವುದಕ್ಕಿಂತಲೂ ತಾಯ್ತಂದೆತನದ ಅನುಭವವು ಮುಖ್ಯವಾಗಿದ್ದು ಬದುಕಿಗೆ ಹೆಚ್ಚು ಅರ್ಥ ಕೊಡುತ್ತದೆ. ಆದುದರಿಂದ ಮಗುವನ್ನು ಬಯಸುವ ದಂಪತಿಗಳು ಈ ವಿಷಯದಲ್ಲಿ ನಿಚ್ಚಳವಾದ ಅಭಿಪ್ರಾಯವನ್ನು ಹೊಂದುವುದು ಅಗತ್ಯ. ಮಗು ಬೇಡ ಎನ್ನುವವರ ಅಭಿಪ್ರಾಯವನ್ನು ಅವರ ಹಿರಿಯರು ಗೌರವಿಸುವುದೂ ಅತ್ಯಗತ್ಯ. ಹಾಗೆ ಗೌರವಿಸದ ಹಿರಿಯರನ್ನು ಯುವಕಯುವತಿಯರು ದೃಢವಿಶ್ವಾಸದಿಂದ ಎದುರಿಸಿ ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕಾಗುತ್ತದೆ. ಸಂತಾನೋತ್ಪತ್ತಿ ಖಾಸಗಿ ವಿಷಯ. ತಾಯ್ತಂದೆತನವನ್ನು ಬಲವಂತದಿಂದ ಹೇರಕೂಡದು. ತಾಯ್ತಂದೆತನವು ಹೆಣ್ಣುಗಂಡುಗಳ ಲಿಂಗೀಯತೆಯನ್ನು ಅಳೆಯುವ ಅಳತೆಗೋಲು ಎಂದಿಗೂ ಆಗಕೂಡದು. ಹೆಣ್ಣುಗಂಡುಗಳಿಗೆ ತಾಯಿತಂದೆಯಾಗದೆ ಕೇವಲ ದಂಪತಿಯಾಗಿ ಬದುಕಲು ಹಕ್ಕಿದೆ.

ಈಗ ಸಮಗ್ರವಾಗಿ ಯೋಚಿಸಿ: ನಿಮಗೆ ಮಗುವು ಬೇಕೆ? ಏಕೆ?

ಉಚಿತ ಸಹಾಯವಾಣಿಗೆ ಕರೆಮಾಡಿ: 8494944888.